**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/239/2019/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 12th December, 2022.

# RECOMMENDATION

Sub: Departmental Inquiry against Shri Nanjegowda, the then Panchayath Development Officer and Secretary, Lakkondahally Grama Panchayath, Vijayapura, Devanahally Taluk, Bengaluru Rural District (now retired)-reg.

Ref: 1) Government Order No.ಗ್ರಾಅಪ/228/ಗ್ರಾಪಂಕಾ/2019, Bengaluru, dated: 24/09/2019.

2) Nomination Order No.UPLOK-2/DE/239/2019, Bengaluru, dated: 01/10/2019 of Upalokayukta, State of Karnataka, Bengaluru.

3) Inquiry Report dated: 09/12/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 24/09/2019 initiated the disciplinary proceedings against Shri Nanjegowda, the then Panchayath Development Officer, Lakkondahally Grama Panchayath and Secretary, Vijayapura, Devanahally Taluk, Bengaluru Rural District (now retired) (hereinafter referred to as

Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/239/2019, Bengaluru, dated: 01/10/2019 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri Nanjegowda, the then Panchayath Development Officer and Secretary, Lakkondahally Grama Panchayath, Vijayapura, Devanahally Taluk, Bengaluru Rural District (now retired) was tried for the following charges:

**ಅನುಬಂಧ–1**

**ದೋಷಾರೋಪಣೆ**

2. ಆಪಾದಿತ ಸರ್ಕಾರಿ ನೌಕರರಾದ ನೀವು ಶ್ರೀ ನಂಜೇಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಲಕ್ಕೋಂಡನಹಳ್ಳಿ ಗ್ರಾಮ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆದ ನೀವು ಈ ಕೆಳಕಂಡ **ಕರ್ತವ್ಯಲೋಪ**ವೆಸಗಿರುತ್ತೀರಿ.

**3.** **ಎ.** ಅ.ಸ.ನೌ ಆದ ನೀವು, ಕಮ್ಮಸಂದ್ರ ಗ್ರಾಮದಲ್ಲಿ ಸರ್ಕಾರದಿಂದ ಮಂಜೂರಾಗುವ ಆಶ್ರಯ/ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿರುವ ಸವಲತ್ತುಗಳನ್ನು ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಪದ್ಮ ಕೋಂ ಜಿನ್ನಪ್ಪ ಮತ್ತು ಹಾಲಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ. ಕೆ. ಹೆಚ್ ದೇವರಾಜ್ ಹಾಗೂ ಶ್ರೀಮತಿ. ಭಾಗ್ಯಮ್ಮ ಎಂಬುವವರುಗಳಿಗೆ ಹಾಗೂ ಅವರುಗಳ ಸಂಬಂಧಿಕರಿಗೆ ಮಂಜೂರು ಮಾಡಿದ್ದು, ನೀವು ಕರ್ತವ್ಯ ಲೋಪವೆಸಗಿರುತ್ತೀರಿ.

**ಬಿ.** ಅಲ್ಲದೇ ಹೀಗೆ ಮಂಜೂರು ಮಾಡಿರುವ ಒಟ್ಟು 12 ಮನೆಗಳನ್ನು ಸಹ ಕಟ್ಟದೇ ಬೇರೆ ಯಾವುದೋ ತಳಪಾಯ/ಮನೆ ತೋರಿಸಿ ಬಿಲ್ಲು ಮಾಡಿಸಿಕೊಂಡಿರುತ್ತೀರಿ.

**ಸಿ.** ಹೀಗೆ ನೀವು ನಿಮ್ಮ ಪ್ರಭಾವವನ್ನು ಬಳಸಿ ಕಮ್ಮ ಸಂದ್ರ ಗ್ರಾಮದ ಬಡ ಜನರಿಗೆ ದೊರಕಬೇಕಾಗಿದ್ದ ಸರ್ಕಾರದ ಯೋಜನೆಯನ್ನು ಪ್ರಭಾವಿ ವ್ಯಕ್ತಿಗಳಿಗೆ ಸಿಗುವಂತೆ ಮಾಡಿರುತ್ತೀರಿ.

4. ಸತ್ಯವಾರ ರಸ್ತೆಯ ಚರಂಡಿ ರಿಪೇರಿಯ ಕಾಮಗಾರಿಗೆ ಸಂಬಂಧಪಟ್ಟಂತೆ, ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಅಂದರೆ ಎಸ್ಟಿಮೇಷನ್, ಬಿಲ್ಲುಗಳನ್ನು ಸೃಷ್ಟಿಸಿ ಸದರಿ ಕಾಮಗಾರಿಗೆ ಸಂಬಂಧಿಸಿದ ರೂ:20,000/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

5. ನೀರು ಹೊಂಡ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಸಂಬಂಧಪಟ್ಟಂತೆ, ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಅಂದರೆ ಎಸ್ಟಿಮೇಷನ್, ಬಿಲ್ಲುಗಳನ್ನು ಸೃಷ್ಟಿಸಿ ಸದರಿ ಕಾಮಗಾರಿಗೆ ಸಂಬಂಧಿಸಿದ ರೂ: 16,625/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

6. ಕಮ್ಮಸಂದ್ರ ಸತ್ಯಾವರ ರಸ್ತೆಯಿಂದ ಶ್ರೀ ಬಜಂತ್ರಿ ಮನೆಯವರ ರಸ್ತೆಯ ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆಯು ಸಹ ಸದರಿ ಕಾಮಗಾರಿಯನ್ನು ಕೈಗೊಳ್ಳದೇ ನೀವು ದಾಖಲಾತಿಗಳನ್ನು ಸೃಷ್ಟಿಸಿ, ಸದರಿ ಕಾಮಗಾರಿಗೆ ಸಂಬಂಧಿಸಿದ ರೂ:33,443/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

7. ಕಮ್ಮಸಂದ್ರ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆಯೂ ಸಹ ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಸೃಷ್ಟಿಸಿ, ಸದರಿ ಕಾಮಗಾರಿಗೆ ಸಂಬಂಧಿಸಿದ ರೂ: 8,140/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು, ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವುಗಳು, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ **3(೧) (i)** ಮತ್ತು **(iii)** ನೇ ನಿಬಂಧನೆಯನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುತ್ತೀರಿ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has **'Partly Proved Point No.1' and 'Not Proved Point Nos.2 to 5'** of the charges leveled against DGO, Shri Nanjegowda, the then Panchayath

Development Officer and Secretary, Lakkondahally Grama Panchayath, Vijayapura, Devanahally Taluk, Bengaluru Rural District (now retired).

5. On perusal of the Inquiry Report, in order to prove the guilt of the DGO, the Disciplinary Authority has examined one witnesses i.e., PW-1 and Ex. P-1 to P-22 documents were got marked. DGO has examined himself as DW-1 and got marked Ex. D-1 to D-7 documents.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the First Oral Statement of DGO furnished by the Inquiry Officer, DGO, Shri Nanjegowda has retired from service on 31/05/2012.

8. Having regard to the nature of charge **'Partly Proved Point No.1' and 'Not Proved Point Nos.2 to 5'** against DGO, Shri Nanjegowda, the then Panchayath Development Officer and Secretary, Lakkondahally Grama Panchayath, Vijayapura,

Devanahally Taluk, Bengaluru Rural District (now retired) and on consideration of the totality of circumstances:-

"It is hereby recommended to the Government to impose penalty of withholding 10% of pension payable to DGO, Shri Nanjegowda, the then Panchayath Development Officer and Secretary, Lakkondahally Grama Panchayath, Vijayapura, Devanahally Taluk, Bengaluru Rural District (now retired) for a period of 1 year".

9. Action taken in the matter shall be intimated to this Authority.

Connected records are enclosed herewith.

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-239/2019/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 09/12/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ನಂಜೇಗೌಡ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಲಕ್ಕೋಂಡನಹಳ್ಳಿ ಗ್ರಾಮ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/18/2011/ಡಿ.ಆರ್.ಇ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 02/03/2019.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/228/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 24/09/2019.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/239/2019, ಬೆಂಗಳೂರು ದಿನಾಂಕ: 01/10/2019.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಮುನಿರಾಜು ಕೆ.ಎಂ** ಬಿನ್ ಮರಿಯಪ್ಪ, ಕಮ್ಮಸಂದ್ರ ಗ್ರಾಮ, ಹಸಿಗಾಳ ಅಂಚೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ನಂಜೇಗೌಡ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಲಕ್ಕೋಂಡನಹಳ್ಳಿ ಗ್ರಾಮ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ 2005-06ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಆಯ್ಕೆಯಾದ

ಫಲಾನುಭವಿಗಳಿಗೆ ಮನೆಯನ್ನು ಮಂಜೂರಾಗಿತ್ತು ಮತ್ತೆ ಅವರನ್ನೇ ಇದೇ ಯೋಜನೆಯಡಿಯಲ್ಲಿ 2006-07, 2007-08ರಲ್ಲಿ ಫಲಾನುಭವಿಗಳೆಂದು ಆಯ್ಕೆ ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ. ಅಲ್ಲದೇ ಹೀಗೆ ಮಂಜೂರಾತಿಯಾಗಿರುವ 12 ಮನೆಗಳನ್ನು ಸಹ ಕಟ್ಟದೇ ಬೇರೆ ಯಾವುದೋ ತಳಪಾಯ/ಮನೆ ತೋರಿಸಿ ಬಿಲ್ಲನ್ನು ಮಾಡಿಕೊಂಡಿರುತ್ತಾರೆ. ಮುಂದುವರೆದು ಸತ್ಯವಾರ ರಸ್ತೆಯ ಚರಂಡಿ ರಿಪೇರಿಯ ಕಾಮಗಾರಿಗೆ ಸಂಬಂಧಪಟ್ಟಂತೆ ಸದರಿ ಕಾಮಗಾರಿಯನ್ನು ಮಾಡದೇ ದಾಖಲೆಗಳನ್ನು ಸೃಷ್ಟಿಸಿ ರೂ.20,000/-ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ಮುಂದುವರೆದು, ನೀರು ಹೊಂಡ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಸಂಬಂಧಪಟ್ಟಂತೆ, ಕಮ್ಮಸಂದ್ರ ಸತ್ಯವಾರ ರಸ್ತೆಯಿಂದ ಶ್ರೀ. ಭಜಂತ್ರಿ ಇವರ ಮನೆಯ ರಸ್ತೆವರೆಗಿನ ರಸ್ತೆ ಕಾಮಗಾರಿಗೆ ಸಂಬಂಧಪಟ್ಟಂತೆ, ಕಮ್ಮಸಂದ್ರ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆ ಕಾಮಗಾರಿಗಳನ್ನು ಕೈಗೊಳ್ಳದೇ ದಾಖಲಾತಿಗಳನ್ನು ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 24/09/2019ರ ಸರ್ಕಾರದ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 01/10/2019 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 05/11/2019 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ

2. ಆಪಾದಿತ ಸರ್ಕಾರಿ ನೌಕರರಾದ ನೀವು ಶ್ರೀ ನಂಜೇಗೌಡ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಲಕ್ಕೋಂಡನಹಳ್ಳಿ ಗ್ರಾಮ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಆದ ನೀವು ಈ ಕೆಳಕಂಡ **ಕರ್ತವ್ಯಲೋಪ**ವೆಸಗಿರುತ್ತೀರಿ.

3. ಎ. ಅ.ಸ.ನೌ ಆದ ನೀವು, ಕಮ್ಮಸಂದ್ರ ಗ್ರಾಮದಲ್ಲಿ ಸರ್ಕಾರದಿಂದ ಮಂಜೂರಾಗುವ ಆಶ್ರಯ/ಅಂಬೇಡ್ಕರ್ ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿರುವ ಸವಲತ್ತುಗಳನ್ನು ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಪದ್ಮ ಕೋಂ ಜಿನ್ನಪ್ಪ ಮತ್ತು ಹಾಲಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ. ಕೆ. ಹೆಚ್ ದೇವರಾಜ್ ಹಾಗೂ ಶ್ರೀಮತಿ. ಭಾಗ್ಯಮ್ಮ ಎಂಬುವವರುಗಳಿಗೆ ಹಾಗೂ ಅವರುಗಳ ಸಂಬಂಧಿಕರಿಗೆ ಮಂಜೂರು ಮಾಡಿದ್ದು, ನೀವು ಕರ್ತವ್ಯ ಲೋಪವೆಸಗಿರುತ್ತೀರಿ.

   ಬಿ. ಅಲ್ಲದೇ ಹೀಗೆ ಮಂಜೂರು ಮಾಡಿರುವ ಒಟ್ಟು 12 ಮನೆಗಳನ್ನು ಸಹ ಕಟ್ಟದೇ ಬೇರೆ ಯಾವುದೋ ತಳಪಾಯ/ಮನೆ ತೋರಿಸಿ ಬಿಲ್ಲು ಮಾಡಿಸಿಕೊಂಡಿರುತ್ತೀರಿ.

   ಸಿ. ಹೀಗೆ ನೀವು ನಿಮ್ಮ ಪ್ರಭಾವವನ್ನು ಬಳಸಿ ಕಮ್ಮ ಸಂದ್ರ ಗ್ರಾಮದ ಬಡ ಜನರಿಗೆ ದೊರಕಬೇಕಾಗಿದ್ದ ಸರ್ಕಾರದ ಯೋಜನೆಯನ್ನು ಪ್ರಭಾವಿ ವ್ಯಕ್ತಿಗಳಿಗೆ ಸಿಗುವಂತೆ ಮಾಡಿರುತ್ತೀರಿ.

4. ಸತ್ಯವಾರ ರಸ್ತೆಯ ಚರಂಡಿ ರಿಪೇರಿಯ ಕಾಮಗಾರಿಗೆ ಸಂಬಂಧಪಟ್ಟಂತೆ, ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಅಂದರೆ ಎಸ್ಟಿಮೇಷನ್, ಬಿಲ್ಲುಗಳನ್ನು ಸೃಷ್ಟಿಸಿ ಸದರಿ ಕಾಮಗಾರಿಗೆ ಸಂಬಂಧಿಸಿದ ರೂ:20,000/– ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

5. ನೀರು ಹೊಂಡ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಸಂಬಂಧಪಟ್ಟಂತೆ, ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಅಂದರೆ ಎಸ್ಟಿಮೇಷನ್, ಬಿಲ್ಲುಗಳನ್ನು ಸೃಷ್ಟಿಸಿ ಸದರಿ ಕಾಮಗಾರಿಗೆ ಸಂಬಂಧಿಸಿದ ರೂ: 16,625/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

6. ಕಮ್ಮಸಂದ್ರ ಸತ್ಯಾವರ ರಸ್ತೆಯಿಂದ ಶ್ರೀ ಬಜಂತ್ರಿ ಮನೆಯವರ ರಸ್ತೆಯ ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆಯು ಸಹ ಸದರಿ ಕಾಮಗಾರಿಯನ್ನು ಕೈಗೊಳ್ಳದೇ ನೀವು ದಾಖಲಾತಿಗಳನ್ನು ಸೃಷ್ಟಿಸಿ, ಸದರಿ ಕಾಮಗಾರಿಗೆ ಸಂಬಂಧಿಸಿದ ರೂ:33,443/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

7. ಕಮ್ಮಸಂದ್ರ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆಯೂ ಸಹ ಸದರಿ ಕಾಮಗಾರಿಯನ್ನು ಮಾಡದೇ, ದಾಖಲಾತಿಗಳನ್ನು ಸೃಷ್ಟಿಸಿ, ಸದರಿ ಕಾಮಗಾರಿಗೆ ಸಂಬಂಧಿಸಿದ ರೂ: 8,140/- ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು, ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವುಗಳು, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ **3(I) (i)** ಮತ್ತು **(ii)** ನೇ ನಿಬಂಧನೆಯನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುತ್ತೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

8. The complainant Sri Muniraju K.M., S/o. Mariyappa, Kammasandra Village, Hasigala Post, Hosakote Taluk,

Bengaluru Rural District, (hereinafter referred as complainant in short) has filed this complaint against Sri Devaraj.K.H., Member, (2) Smt.Padmavathi, Ex.Member, and (3) Sri Nanjegowda, PDO of Lakkondahally Gram Panchayath, Devanahally Taluk,(hereinafter referred as respondents 1 to 3) and the same is taken up for investigation u/s 9 of the Karnataka Lokayukta Act, 1984.

9. It is stated in complaint that the following persons who are relatives of Respondent No.2 Smt. Padmavathi, Ex-Member of Lakkondahalli Grama Panchayath were granted houses under various schemes of Rajiv Gandhi Housing Corporation Limited;

1. During the year 2005, a house was granted in the name of Smt. Padma;
2. Smt. Hanumakka, mother of Smt. Padma who was not a resident of Kammadasanda village was granted two houses;
3. Smt. Nethravathi, (wife of brother of Smt.Padma), who was not a resident of Kammasandra Village, was granted one house;
4. Smt.Lakshmamma (mother-in-law of Smt. Padma), was granted two houses;
5. Sri Chikkappaiahnna, (father-in-law of Smt.Padma) was granted one house;

6. Smt.Sakamma (a relative of Smt. Padma her husband Sri Chinnappa) was granted two houses;
7. Smt. Muniyamma (mother of Smt.Sakamma) was granted one house;
8. Smt.Manjula (daughter of Smt. Sakamma) was granted two houses;

10. Thus 12 houses were granted in the names of relatives of ex-member of the Lakkondahalli Grama Panchayath. The above persons have not constructed houses. But bills were prepared showing the foundations of some other houses.

11. Likewise the following persons, who are relatives of first respondent Sri Devaraj, were granted houses under various housing schemes;

(i) Smt. Chikkananjamma, (mother of Sri Devaraj) was granted two houses;

(ii) Sri Narayanaswamy brother of Sri Devaraj was granted one house.

(iii) The relatives of Sri Devaraj, namely (a)Smt.Munithayamma W/o. Manjunath; (b)Smt.Manjula W/o. Muniraju; (c)Smt. Shobha W/o. Shivanna; (d)Smt.Sunandamma W/o. Narayanaswamy; (e) Sri Dileep Kumar S/o.Chowdappa;(f) Smt.Parvathamma W/o. K.P. Narayanaswamy; (g)Smt.Yashodamma W/o. Ramesh were granted houses

(iv) Smt.Munilakshmamma W/o Narayanaswamy and Smt.Lakshmamma W/o Narayanaswamy (both are one and same person) were granted two houses.

The above persons have not constructed houses. But, bills were raised by showing the other foundation/houses.

12. Another Member of the Panchayath Smt. Bhagyamma was granted a house. Her relatives namely Smt. Manjula (wife of brother-in-law), Smt. Munithayamma and her two daughter-in-laws Smt. Rajeshwari and Eramma were granted one house each.

13. The first Respondent had got issued voter identity card and ration cards in respect of his relatives.

14. It is further alleged that Sri Beeresha, who was working as Bill Collector, has got sanctioned a site allotted to his sister-in-law, namely Vasantha of Kolar Village, which site was reserved for school building.

15. An ex-member of the Panchayath, Sri Chinnappa had encroached 35 guntas of Government land in Sy. No.30 of Kammasandra Village.

16. The complainant has further alleged that in relation to the following civil works, the respondents have raised bills without executing the works and misappropriated the amount.

(i) Improvement of road from Sathyawara Road to the house of Sri Bajantri – Estimated cost - Rs.40,000/- (12th finance scheme for the year 2009-10)

(ii) Drainage works by the side of Sathyavara road (SGRY Scheme for the year 2004-05)

17. Allegation is also made against one Sri Vasanthakumar, who was running a fair price shop at Kammasandra Village stating that the articles were not being distributed to the card holders.

18. The first Respondent has offered comments dated 16/3/2011 to the complaint allegations, denying the allegations. He has stated that the complainant being unsuccessful in the Panchayath elections, has made false allegations. The houses were allotted to the beneficiaries after passing resolutions in the Grama Sabha. No irregularities were committed in the allotment of houses to the beneficiaries. With regard to civil works, he has stated that the works were executed satisfactorily. Therefore, he requested for closing the complaint.

B

19. The complainant has filed his rejoinder dated 8.4.2011 along with documents reiterating the complaint allegations and stated that the comments offered by first Respondent are false.

20. Thereafter, the 3rd Respondent, who was working then as Secretary/Panchayath Development officer of Lakkondahalli Grama Panchayath was impleaded as additional Respondent and his comments were called. The 3rd Respondent filed his comments dated 23/1/2019, denying the allegations made in the complaint.

21. The copies of the documents submitted by the Complainant and first Respondent are examined with reference to the complaint allegations and noticed the following;

(1)As per the copy of the list of beneficiaries selected under Grameena Ashraya Scheme for the year 2006-07, Smt. Hanumakka W/o. Late Veerabhadrappa was selected as one the beneficiaries at Sl.No.17. Again for the year 2008-09the name of Smt. Hanumakka W/o. Late Veerabhadrappa was included in the list of beneficiaries for the Grameena Ashraya Scheme for the year 2008-09 at Sl.No.11. Therefore, Smt. Hanumakka W/o. Late Veerabhadrapa was allotted two houses in different years.

(2)As per the copy of form No.1 – application for grant of benefit of the scheme, Smt. Padma W/o.Chinnapa was allotted a house for the year 2005

(3)Smt. Lakshmamma W/o. Chikkappaiahnna was selected as a beneficiary under Indira Awaz Scheme for the year 2008-09, As per the copies of Form No.1, it is seen that two different houses were allotted to Smt.Lakshmamma W/o. Chikkappaiahnna.

(4)Sri Chikkappaiahnna S/o. Chinnappa was allotted a house under under Grameena Ashraya Scheme for the year 2008-09, as per the list of beneficiaries for the year 2008-09.

(5)Smt. Nethravathi W/o. Mallesh was allotted a house under Indira Awaz scheme, as per list of beneficiaries for the year 2008-09.

(6)As per list of beneficiaries for the year 2006-07, Smt. Sakamma W/o.Krishnappa was allotted a house under Grameena Ashraya Scheme for the year 2006-07. Again, as per the list of beneficiaries for the year 2009-10, Smt.Sakamma W/o.Krishnappa was allotted a house under Indira Awaz Scheme for the year 2009-10.

(7)As per the list of beneficiaries for the year 2006-07 under Grameena Ashraya Scheme, Smt. Muniyamma W/o. Late Chinnaiah was allotted a house.

(8)As per the list of beneficiaries for the year 2006-07 under Grameena Ashraya scheme, Smt. Manjula was granted a house under Grameena Ashraya Scheme.

(9)As per the list of beneficiaries for the year 2006-07 of Grameena Ashraya Scheme, Smt. Chikkananjamma W/o. Late Hanumantharayappa was sanctioned with a house. Again, as per the list of beneficiaries for the year 2008-09 under Grameena Ashraya scheme, Smt. Chikkananjamma W/o.Hanumantharayappa was allotted a house. It is seen from the applications submitted to the Rajiv Gandhi Rural Housing Corporation the photographs are one and the same. Therefore, two houses are allotted to one and the same person.

(10) As per the list of beneficiaries of Grameena Ashraya Scheme for the year 2005-06 Sri Narayanaswamy S/o. Hanumantharayappa was allotted a house.

(11) As per list of beneficiaries for the year 2009-10 under Indira Awaz Scheme, Smt. Munithayamma W/o.Late Manjunath was allotted a house. As per list the beneficiaries of Grameena Ashraya scheme for the year 2006-07, Smt.Manjula W/o. Muniraju was allotted a house; As per list of beneficiaries for the year 2005-06 of Grameena Ashraya scheme, Smt. Shoba W/o.Shivanna was allotted a house; As per the list of beneficiaries for the year 2008-09 of Grameena Ashraya scheme Smt. Sunandamma W/o.K.M. Narayanaswamy was allotted a house; As per list of beneficiaries for the year 2008-09 of Indira Awaz scheme, Sri Dileepkumar S/o. Chowdappa was

allotted a house; as per list of beneficiaries for the year 2008-09, Smt. Parvathamma W/o.K.P.Narayanaswamy was allotted a house; as per the list of beneficiaries for the year 2006-07, Smt.Yashodamma W/o. Ramesh was allotted a house.

(12) In the list of beneficiaries for the year 2006-07, Smt. Munilakshmamma W/o. K.M. Narayanaswamy is shown as a beneficiary for allotment of house under Grameena Ashraya Scheme. In the list of beneficiaries for the year 2009-10, Smt. Lakshmamma W/o. K.M. Narayanaswamy is shown as a beneficiary for allotment of house under Indira Awaz Scheme. As per the complainant, both Munilakshmma and Lakshmamma are one and the same person, but by showing different names she was allotted two houses. It is seen from the applications submitted to the Rajiv Gandhi Rural Housing Corporation in the names of Smt.Lakshmamma and Smt.Munilakshmamma, the photographs are one and the same. Therefore, two houses are allotted to one and the same person.

(13) As per the list of beneficiaries for the year 2009-10 under Indira Awaz Scheme, Smt. Bhagyamma W/o. Manjunath was allotted a house. In the same list, Smt. Munithayamma W/o. Late Papanna was allotted a house. In the beneficiaries list for the year 2005-06 under Grameena Ashraya Scheme, Smt. Rajeshwari W/o. Muniraju was allotted a house.

22. From the above, it disclose that the persons named in the complaint were granted houses under various

schemes from the year 2005-06 to 2009-10. As per the complaint allegations, the above persons are relatives of first and second respondents and one Smt. Bhagyamma, member of the Lakkondahalli Grama Panchayath. There are no documents to link their relationships with the first and second Respondent and Smt. Bhagyamma.

23. As stated above, at Sl. Nos.(1), (3), (9) and (12), Smt. Hanumakka; Smt. Lakshmamma W/o. Chikkappaiahnna; Smt. Chikkananjamma and Smt. Munilakshmamma (Lakshmamma) were granted two houses each by the Panchayath, which is in violation of the Rules.

24. Smt. Lakshmamma W/o. Chikkappaiaiahnna mentioned at Sl. No.3 (para 13) and Sri Chikkappaiahnna S/o. Chinnappa mentioned at Sl. No.4 (Para 13) are the wife and husband. However, Smt. Lakshmamma was granted two houses and Sri Chikkappaiahnna was granted one house. Thus, three houses were granted to the persons of same family.

25. In relation to execution of work of repair of drainage on the road towards Sathyavara road: The first Respondent along with his comments has furnished copy of estimate in relation to the above work. The estimate was

prepared for a sum of Rs.20,000/-. This estimate was signed by Junior Engineer, Taluk Panchayath, Hosakote. The date of preparation of estimate is not forthcoming. The first and part bill in relation to the above work was prepared for a sum of Rs.9,800/-, which is attested by President (Smt. Nagarathnamma) and Secretary (third Respondent). In the first and part Bill, a sum of Rs.5000/- is shown to have been spent for materials and a sum of Rs.4,800/- is shown to have been spent for wages. The Bill for procurement of the materials is not forthcoming. On the obverse of the Bill, the details of materials i.e., 20 bags of cement, 15 mm Granite slabs and 10mm granite slabs is mentioned. The same is not attested by any person. The President and Secretary, who have attested the first and part bill have not affixed the date on which the Bill was passed. The mode of payment of bill i.e. by cash or through cheque is not mentioned.

26. In relation to the above work, in the contract bill, it is stated that the measurement of work was taken on 28/8/2003 and recorded at page 93 of the measurement book No.LH/6282. The officer in charge of work (Junior Engineer, Taluk Panchayath, Hosakote) has not affixed the date below his signature. The extract of

measurement book is not furnished. The work was not check measured by the Sub-divisional officer.

27. In relation to the above work, the second and final bill for a sum of Rs.20,000/- was prepared. The third Respondent has affixed his signature on the bill. He has not put the date of passing the bill. The signature of President is not found on the Bill. The total value shown in the Bill is Rs.10,000/- (NMR) and Rs.10,000/- (materials). The person who received the amount of Rs.10,000/- as shown in the Bill cannot be identified. The details of work shown on the obverse of the Bill is nothing but extract of estimate.

28. The first Respondent has also furnished copy of the NMR sheet in relation to the above work. The signatures of alleged NMR workers found on the NMR roll are scored off. The date of execution work is not forthcoming on the NMRs.

29. In view of the above discrepancies there are reasons to believe that the execution of work of repair of drainage was not executed.

30. In relation to the execution of work of construction of Water Pond and installation of pipeline: The first

Respondent has furnished copy of the estimate in relation to the above work, which was prepared for a sum of Rs.17,005/-. The President and Secretary of Lakkondahalli Grama Panchayath and Junior Engineer have attested estimate. The Assistant Executive Engineer, Panchayath Raj Engineering Sub Division, Hosakote, has not affixed his signature. The date of preparation of estimate is not forthcoming.

31. The contract Bill for a sum of Rs.17,065/- was prepared in respect of the above work. After deduction of a sum of Rs.380/- the bill was passed for a sum of Rs.16,625/-. The President and Secretary of the Panchayath have attested the Bill. The date on which the bill was passed is not forthcoming. The person who received the amount of Rs.16,625/- has not affixed his signature.

32. In the contract certificate, the officer in charge of work has stated that he had taken the measurements of above work on 20/5/2008 and recorded the same at pages 1 of measurement book No.13 - 15. The measurement book number stated therein is not clear. The contractor has not affixed his signature on the place shown for his signature. The details of work mentioned on the obverse of the contract certificate is incomplete and details cannot be verified. There is no check measurement of

work by the sub divisional officer. The extract of measurement book is not furnished for verification.

33. The mode of payment of bill is not forthcoming. In the extract of cash book, a sum of Rs.16,625/- is shown to have been paid on 29/6/2009 towards the pipeline work at Kammasandra. The details regarding the persons to whom the payment was made, whether it is through cash or cheque are not mentioned.

34. There are reasons to believe that the above work was not executed and the documents were fabricated to show that the work was executed.

35. In relation to the work of improvement of road from Kammasandra Sathyavara road till the house of Sri Bajentri:

i) As per the copy of the estimate furnished by first respondent, the total cost of the work is shown as Rs.37,000/-. The estimate was signed by the President and Secretary of Lakkondahalli Grama Panchayath. The Assistant Engineer and the Assistant Executive Engineer have not affixed their signatures.

ii) The Contract Bill in relation to the above work was prepared for a sum of Rs.36,750/-. After statutory deductions, the bill was passed for a sum of Rs.33,443/-.

iii) The President and Secretary of Lakkondahalli Grama Panchayath have attested the Bill without affixing the date of passing the Bill. The contractor has not affixed his signature on the Contract certificate and regarding receipt of amount.

iv) The officer in charge of work has stated that he has taken measurement of work on 5/5/2009 and recorded the same at page 5 of Measurement book No.1. The sub divisional officer has not check measured the work. The extract of measurement book has not been furnished for verification.

v) The details of work mentioned on the obverse of the contract certificate is totally obscure and it cannot be verified.

vi) In the copy of the extract of cash book, a sum of Rs.33,443/- is shown to have been paid on 14/5/2009. The details of person to whom the amount was paid and mode of payment i.e., whether through cheque or cash is not mentioned.

vii) In view of the above discrepancies, there are reasons to believe that the above work was not at all executed.

36. In relation to the execution of work of desilting from the drainage of Kammasandra village:

i) The first Respondent has furnished the copy of estimate in relation to the above work, which was prepared for a sum of Rs.8,200/-.

The estimate was signed by the President and Secretary of Lakkondahalli Grama Panchayath. The Assistant Engineer and the Assistant Executive Engineer have not affixed their signatures.

ii) The Contract Bill in relation to the above work was prepared for a sum of Rs.8,140/-. The President and Secretary of Lakkondahalli Grama Panchayath have attested the Bill without affixing the date of passing the Bill. The contractor has not affixed his signature on the Contract certificate.

iii) The officer in charge of work has stated that he has taken measurement of work on 5/5/2009 and recorded the same at page 5 of Measurement book No.1. The sub divisional officer has not check measured the work. The extract of measurement book has not been furnished for verification.

iv) The details of work mentioned on the obverse of the contract certificate is totally obscure and it cannot be verified.

v) In the copy of the extract of cash book, a sum of Rs.8,140/- is shown to have been paid on 14/5/2009. The numericals in the cash book is altered. The details of person to whom the amount was paid and mode of payment i.e., whether through cheque or cash is not mentioned.

In view of the above discrepancies, there are reasons to believe that the above work was not at all executed.

37. In view of the above discussions, there is prima facie material to proceed against the third Respondent Sri M. Nanjegowda, the then Secretary of Lakkondahalli Grama Panchayath, Hosakote Taluk – presently retired and residing at Market road, Vijayapura, Devanahalli Taluk, Bengaluru Rural District.

38. Therefore, in exercise of the powers vested u/s 12(3) of the Karnataka Lokayukta Act, 1984, this recommendation is made to the Competent Authority to initiate departmental disciplinary enquiry against the respondent and to entrust enquiry to Upalokayukta.

39. Further, as per Sec.12(4) of the Karnataka Lokayukta Act, the competent authority is required to intimate the action taken or proposed to be taken on this report within three months from the date of receipt of this report. Hence this charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 09/12/2019 ರಂದು

ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಕಮ್ಮಸಂದ್ರ ಗ್ರಾಮದ ಹಾಲಿ ಹಾಗೂ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ. ಪದ್ಮ, ದೇವರಾಜ್ ಹಾಗೂ ಇವರ ಸಂಬಂಧಿಕರಾದ ಶ್ರೀಮತಿ. ಭಾಗ್ಯಮ್ಮ ಇವರುಗಳಿಗೆ 2005–06ನೇ ಸಾಲಿನ ಆಶ್ರಯ/ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ ಯಾವುದೇ ಮನೆ ಮಂಜೂರು ಆಗಿರುವುದಿಲ್ಲ. ಗ್ರಾಮ ಸಭೆಯಲ್ಲಿ ಅನುಮೋದನೆಗೊಂಡಂತಹ ಫಲಾನುಭವಿಗಳಿಗೆ ಮನೆ ನೀಡಲು ಆಯ್ಕೆ ಮಾಡಲಾಗಿರುತ್ತದೆ. ಈ ರೀತಿ ಆಯ್ಕೆಯಾದ ಪಟ್ಟಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ.

7. ಮುಂದುವರೆದು ಆಯ್ಕೆಯಾದ ಫಲಾನುಭವಿಗಳಿಗೆ ಒಂದೇ ಬಾರಿ ಬಿಲ್ಲುಗಳನ್ನು ಮಂಜೂರು ಮಾಡಿರುವುದಿಲ್ಲ. 4 ಹಂತಗಳಲ್ಲಿ ಮನೆಗಳನ್ನು ಪೂರ್ಣಗೊಳಿಸಿದಂತಹ ಫಲಾನುಭವಿಗಳಿಗೆ ಪ್ರತಿ ಹಂತ ಪೂರ್ಣಗೊಂಡ ನಂತರದಲ್ಲಿ ಬಿಲ್ಲಿನ ಪಾವತಿಯನ್ನು ಚೆಕ್ ಮುಖಾಂತರ ಪಾವತಿಸಲಾಗಿರುತ್ತದೆ. ರಸ್ತೆ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸತ್ಯವಾರ ರಸ್ತೆ ಚರಂಡಿ ರಿಪೇರಿ ಕಾಮಗಾರಿಗೆ ಅಂದಾಜುಪಟ್ಟಿಯನ್ನು ಕಿರಿಯ ಅಭಿಯಂತರರು ತಯಾರಿಸಿದ್ದು, ಈ ಕಾಮಗಾರಿಯು 2004ನೇ ಸಾಲಿನಲ್ಲಿ ಮಾಡಿದ್ದು, ಕಾಮಗಾರಿಯಲ್ಲಿ ಸ್ಥಳೀಯ ಗ್ರಾಮದ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಕೆಲಸ ನಿರ್ವಹಿಸಲಾಗಿದೆ ಅಂತಾ ಹೇಳಿರುತ್ತಾರೆ. ನೀರು ಹೊಂಡ/ನೀರು ಸಂಗ್ರಹಾಲಯ ನಿರ್ಮಾಣ ಮತ್ತು ಕುಡಿಯುವ ನೀರು ಪೈಪ್‌ಲೈನ್ ಕಾಮಗಾರಿಯು 2009–10ನೇ ಸಾಲಿನಲ್ಲಿ ಕೈಗೊಳ್ಳಲಾಗಿದ್ದು, ಅದನ್ನು ಸಹ ಕಿರಿಯ ಅಭಿಯಂತರರು ಅಂದಾಜುಪಟ್ಟಿಯನ್ನು ತಯಾರಿಸಿ ಕಾಮಗಾರಿಯನ್ನು

ಪೂರ್ಣಗೊಳಿಸಲಾಗಿರುತ್ತದೆ. ಕಾಮಗಾರಿ ಪೂರ್ಣಗೊಂಡ ನಂತರ ಗುತ್ತಿಗೆದಾರರು ಪ್ರಮಾಣ ಪತ್ರವನ್ನು ನೀಡಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಂಡ ಬಗ್ಗೆ ವೀಕ್ಷಿಸಿದ ನಂತರ ಬಿಲ್ಲಿನ ಹಣ ಪಾವತಿ ಮಾಡಲಾಗಿರುತ್ತದೆ ಅಂತಾ ಹೇಳಿರುತ್ತಾರೆ.

8. ಮುಂದುವರೆದು ಕಮ್ಮಸಂದ್ರ ಗ್ರಾಮದ ಸತ್ಯವಾರ ರಸ್ತೆಯಿಂದ ಭಜಂತ್ರಿ ಮನೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 2009ನೇ ಸಾಲಿನಲ್ಲಿ ಕೈಗೊಂಡಿದ್ದು, ಅದರ ಅಂದಾಜುಪಟ್ಟಿಯನ್ನು ಸಹ ಕಿರಿಯ ಅಭಿಯಂತರರು ತಯಾರಿಸಿದ್ದು, ಅಂದಾಜುಪಟ್ಟಿಯಂತೆ ಕಾಮಗಾರಿಯನ್ನು ಪೂರ್ಣ ಮಾಡಲಾಗಿರುತ್ತದೆ ಅಂತಾ ಹೇಳಿರುತ್ತಾರೆ. ಕಮ್ಮಸಂದ್ರ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಯನ್ನು 2009ರಲ್ಲಿ ಕೈಗೊಳ್ಳಲಾಗಿದ್ದು, ಚರಂಡಿಯಲ್ಲಿ ಹೂಳು ತುಂಬಿಕೊಂಡ ಕಾರಣ ಸದರಿ ಚರಂಡಿಯನ್ನು ಸ್ವಚ್ಛಗೊಳಿಸಲಾಗಿರುತ್ತದೆ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

9. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ದೂರುದಾರರು ಮರಣ ಹೊಂದಿದ್ದರಿಂದ, ಉಪ ನಿಬಂಧಕರು ವಿಚಾರಣೆಗಳು–2 ಇವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ ನಿ.ಪಿ.22 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿದಿದ್ದು, ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

11. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1 ಮತ್ತು 2 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ

ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–3:** ಆದೇಶವೇನು?

12. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶಃ ಸಕಾರಾತ್ಮಕವಾಗಿ.**

**ಅಂಶ 2 ರಿಂದ 5: ನಕಾರಾತ್ಮಕವಾಗಿ.**

**ಅಂಶ 6: ಅಂತಿಮ ಆದೇಶದಂತೆ.**

## ಕಾರಣಗಳು

14. ಅಂಶ–1: ಶಿಸ್ತು ಪ್ರಾಧಿಕಾರವು ದೂರುದಾರರು ಮರಣ ಹೊಂದಿದ್ದರಿಂದ, ಉಪ ನಿಬಂಧಕರು ವಿಚಾರಣೆಗಳು–2 ಇವರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ ನಿ.ಪಿ.22 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದೂರಿನಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ದೇವರಾಜ್ ಮತ್ತು ಮಾಜಿ ಸದಸ್ಯೆ ಪದ್ಮಾ ರವರ ಸಂಬಂಧಿಗಳಿಗೆ ವಸತಿ ಯೋಜನೆಯಲ್ಲಿ ಅಕ್ರಮವಾಗಿ ಮನೆ ಮಂಜೂರು ಮಾಡಲಾಗಿದೆ ಎಂದು ಆಪಾದಿಸಲಾಗಿತ್ತು. ಅಲ್ಲದೇ ರಸ್ತೆ ಕಾಮಗಾರಿ ಹಾಗೂ ಚರಂಡಿ ರಿಪೇರಿ ಕಾಮಗಾರಿಯನ್ನು ಮಾಡದೇ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಆಪಾದಿಸಲಾಗಿತ್ತು. ಈ ಬಗ್ಗೆ ಎದುರುದಾರರಿಗೆ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದ್ದು, ಆ ಪ್ರಕಾರ ಅವರು ಆಕ್ಷೇಪಣೆಯನ್ನು ಸಲ್ಲಿಸಿ ಆರೋಪಗಳನ್ನು ಅಲ್ಲಗಳೆದಿರುತ್ತಾರೆ ಅಂತಾ ಹೇಳಿರುತ್ತಾರೆ. ನಂತರ ದಾಖಲಾತಿಗಳನ್ನು ಪರಿಶೀಲಿಸಿ ಆ.ಸ.ನೌ ರವರ ವಿರುದ್ಧ ಕಲಂ.12(3) ರಡಿ ವಿಚಾರಣೆಯನ್ನು ಮಾಡಲು ಕೇಳಿಕೊಂಡಿದ್ದು ಇರುತ್ತದೆ ಅಂತಾ ಹೇಳಿರುತ್ತಾರೆ. ನಿ.ಪಿ.1 ದೂರು; ಫಾರಂ ನಂ.1

ಮತ್ತು ನಿ.ಪಿ.2 ಫಾರಂ ನಂ.3; ದೂರುದಾರರು ಸಲ್ಲಿಸಿದ ಛಾಯಾಚಿತ್ರ ಮತ್ತು ದಾಖಲಾತಿಗಳನ್ನು ನಿ.ಪಿ.4 ರಂತೆ ಗುರುತಿಸಿಕೊಳ್ಳಲಾಗಿದೆ.

15. ಮುಂದುವರೆದು ಇವರ ಸಾಕ್ಷಿಯಲ್ಲಿ 2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಫಲಾನುಭವಿಗಳ ಪಟ್ಟಿಯ ವಿವರವನ್ನು ನಿ.ಪಿ.5 ಅಂತಾ ಗುರುತಿಸಿಕೊಂಡಿದ್ದು, ಅದರಲ್ಲಿ ಅನುಕ್ರಮ ನಂ.17 (ನಿ.ಪಿ.5.ಎ) ರಂತೆ ಶ್ರೀಮತಿ. ಹಣಮಕ್ಕ ಕೋಂ ವೀರಭದ್ರಪ್ಪ ಎನ್ನುವವರಿಗೆ ಮನೆ ಮಂಜೂರಾಗಿದ್ದು ಮತ್ತೇ ಇವರಿಗೆ 2008-09ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ನಿ.ಪಿ.6 ರಲ್ಲಿ ಅನುಕ್ರಮ ನಂ.11 (6.ಎ) ರಲ್ಲಿ ಇವರ ಹೆಸರು ಇದ್ದು ಮತ್ತೆ ಇವರಿಗೆ ಮನೆ ಮಂಜೂರ ಮಾಡಿರುತ್ತಾರೆ ಅಂತಾ ಹೇಳಿರುತ್ತಾರೆ.

16. ಮುಂದುವರೆದು ನಿ.ಪಿ.5 ರಲ್ಲಿ ಶ್ರೀಮತಿ. ಸಾಕಮ್ಮ ಕೋಂ ಕೃಷ್ಣಪ್ಪ ಎನ್ನುವವರಿಗೆ 2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಅನುಕ್ರಮ ನಂ.16 ರಂತೆ (ನಿ.ಪಿ.5.ಬಿ) ರಂತೆ ಫಲಾನುಭವಿಯೆಂದು ಮನೆ ಮಂಜೂರಾಗಿದ್ದು, ಮತ್ತೆ ಇವರಿಗೆ ನಿ.ಪಿ.7 ರಲ್ಲಿ 2009-10 ನೇ ಸಾಲಿನಲ್ಲಿ ಇಂದಿಯಾ ಆವಾಸ್ ಯೋಜನೆಯಲ್ಲಿ ಅನುಕ್ರಮ ನಂ.12 ರಂತೆ ಮನೆ ಮಂಜೂರಾಗಿರುತ್ತದೆ ಅಂತಾ ನುಡಿದಿರುತ್ತಾರೆ.

17. ಮುಂದುವರೆದು ನಿ.ಪಿ.5ರಲ್ಲಿ ಚಿಕ್ಕನಂಜಮ್ಮ ಕೋಂ ಹನುಮಂತರಾಯಪ್ಪ ಎನ್ನುವವರಿಗೆ 2006-07 ನೇ ಸಾಲಿನಲ್ಲಿ ಅನುಕ್ರಮ ನಂ.19 ರಂತೆ (ನಿ.ಪಿ.5.ಸಿ) ರಂತೆ ಫಲಾನುಭವಿಯೆಂದು ಮನೆ ಮಂಜೂರಾಗಿದ್ದು ಮತ್ತೆ ಇವರಿಗೆ 2008-09ನೇ ಸಾಲಿನಲ್ಲಿ ನಿ.ಪಿ.6ರಲ್ಲಿ ಅನುಕ್ರಮ ನಂ.13 ರಂತೆ (ನಿ.ಪಿ.6.ಬಿ) ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಮನೆ ಮಂಜೂರಾಗಿರುತ್ತದೆ ಅಂತಾ ನುಡಿದಿರುತ್ತಾರೆ.

18. ಮುಂದುವರೆದು ನಿ.ಪಿ.5ರಲ್ಲಿ ಮುನಿಲಕ್ಷ್ಮಮ್ಮ ಕೋಂ ನಾರಾಯಣಸ್ವಾಮಿ ಎನ್ನುವವರಿಗೆ 2006-07 ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಅನುಕ್ರಮ ನಂ.7 ರಂತೆ

(ನಿ.ಪಿ.5.ಡಿ) ರಂತೆ ಮನೆ ಮಂಜೂರಾಗಿದ್ದು ಮತ್ತೆ ಇವರಿಗೆ 2009–10ನೇ ಸಾಲಿನಲ್ಲಿ ನಿ.ಪಿ.7ರಲ್ಲಿ ಅನುಕ್ರಮ ನಂ.7 ರಂತೆ (ನಿ.ಪಿ.7.ಬಿ) ಇಂದಿರಾ ಆವಾಸ್ ಯೋಜನೆ ಅಡಿಯಲ್ಲಿ ಮನೆ ಮಂಜೂರಾಗಿರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಈ ಫಲಾನುಭವಿ ತನ್ನ ಹೆಸರನ್ನು ಮುನಿಲಕ್ಷ್ಮಮ್ಮ ಅಂತಾ ತೋರಿಸದೇ ಲಕ್ಷ್ಮಮ್ಮ ಗಂಡ ನಾರಾಯಣಸ್ವಾಮಿ ಅಂತಾ ತೋರಿಸಿದ್ದು ಈ ಬಗ್ಗೆ ಅವರು ಒಂದು ಅರ್ಜಿಯನ್ನು ಸಲ್ಲಿಸಿದ್ದು, ಅದನ್ನು ನಿ.ಪಿ.8 ಅಂತಾ ಗುರುತಿಸಲಾಗಿದ್ದು ಅದರಲ್ಲಿ ಫಲಾನುಭವಿಯ ಹೆಸರು ಲಕ್ಷ್ಮಮ್ಮ ಗಂಡ ನಾರಾಯಣಸ್ವಾಮಿ ಅಂತಾ ಬರೆದಿದ್ದು ಅದರಲ್ಲಿ ಫಲಾನುಭವಿಯ ಭಾಯಾಚಿತ್ರ ಇರುತ್ತದೆ. ಅದೇ ರೀತಿ ಇದೇ ಫಲಾನುಭವಿ ನಿ.ಪಿ.9 ರಂತೆ ಇನ್ನೊಂದು ಅರ್ಜಿಯನ್ನು ಸಲ್ಲಿಸಿದ್ದು ಅದರಲ್ಲಿ ತನ್ನ ಹೆಸರು ಮುನಿಲಕ್ಷ್ಮಮ್ಮ ಗಂಡ ಕೆ.ಎಂ ನಾರಾಯಣಸ್ವಾಮಿ ಅಂತಾ ನಮೂದು ಇದ್ದು ಅದರಲ್ಲಿ ಸಹ ಅವಳ ಭಾಯಾಚಿತ್ರ ಇರುತ್ತದೆ. ನಿ.ಪಿ.8ರಲ್ಲಿ ಇರುವ ಭಾಯಾಚಿತ್ರ ಹಾಗೂ ನಿ.ಪಿ.9ರಲ್ಲಿ ಇರುವ ಭಾಯಾಚಿತ್ರ ಒಂದೇ ಆಗಿರುತ್ತದೆ ಅಂತಾ ನುಡಿದಿರುತ್ತಾರೆ. ಅದರಂತೆ ಶ್ರೀಮತಿ. ಲಕ್ಷ್ಮಮ್ಮ ಕೋಂ ಚಿಕ್ಕಪ್ಪಯ್ಯ ಎನ್ನುವವರಿಗೆ ನಿ.ಪಿ.10 ರಲ್ಲಿ 2008–09ನೇ ಸಾಲಿನಲ್ಲಿ ಇಂದಿರಾ ಆವಾಸ್ ಯೋಜನೆ ಹೊಸ ಮನೆ ಅನುಕ್ರಮ ನಂ.4 ರಲ್ಲಿ (ನಿ.ಪಿ.10.ಎ) ಮನೆ ಮಂಜೂರಾಗಿದ್ದು, 2008–09ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆ ಅಡಿಯಲ್ಲಿ ಶ್ರೀಮತಿ. ಲಕ್ಷ್ಮಮ್ಮ ಇವಳ ಗಂಡನಿಗೆ ಅನುಕ್ರಮ ನಂ.12 ರಂತೆ (ನಿ.ಪಿ.6.ಸಿ) ಮನೆ ಮಂಜೂರಾಗಿರುತ್ತದೆ. ಶ್ರೀಮತಿ. ಲಕ್ಷ್ಮಮ್ಮ ಇವರು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಲ್ಲಿ 2 ಅರ್ಜಿಗಳನ್ನು ನಿ.ಪಿ.11 ಮತ್ತು 12 ರಂತೆ ಮಂಜೂರು ಮಾಡಿಕೊಡಲು ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಒಂದೇ ಕುಟುಂಬಕ್ಕೆ ಅಂದರೆ ಶ್ರೀಮತಿ. ಲಕ್ಷ್ಮಮ್ಮ ಆಕೆಯ ಗಂಡನಿಗೆ ಮನೆ ಮಂಜೂರು ಮಾಡಿದ್ದು ಇರುತ್ತದೆ.

19. ಆ.ಸ.ನೌ ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ನಿ.ಡಿ.1 ರಿಂದ 7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಗ್ರಾಮ ಸಭೆಯ ತರಾವಿನಂತೆ ಮನೆ ಮಂಜೂರಾತಿಯಾಗಿದ್ದು ಮತ್ತು ಅನುಮೋದನೆ ಗ್ರಾಮ ಸಭೆಯಲ್ಲಿ ಆಗಿರುತ್ತದೆ ಅಂತಾ ಹೇಳಿರುತ್ತಾರೆ. ಈ ಬಗ್ಗೆ ನಿ.ಡಿ.2 ರಂತೆ ದಾಖಲಾತಿಯನ್ನು

ಹಾಜರುಪಡಿಸಿರುತ್ತಾರೆ. ಅಲ್ಲದೇ ಆ.ಸ.ನೌ ರವರು ಮೇಲೆ ಹೇಳಿದ ಫಲಾನುಭವಿಗಳಿಗೆ ಮನೆಯನ್ನು ಕಟ್ಟುವಾಗ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲಾಗಿದೆ ಅಂತಾ ನಿ.ಡಿ.3 ರಂತೆ ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆ. ನಿ.ಡಿ.3 ರಲ್ಲಿ ದಾಖಲಾತಿಗಳನ್ನು ಪರಿಶೀಲಿಸಿದಾಗ ಬೇರೆ ಬೇರೆ ಹಂತಗಳಲ್ಲಿ ಹಣ ಬಿಡುಗಡೆಯಾಗಿರುತ್ತದೆ ಅಂತಾ ಕಂಡು ಬಂದರೂ ಸಹಿತ ಪಿ.ಡಬ್ಲ್ಯೂ.1 ಇವರು ಹೇಳಿದ ಹಾಗೆ ಒಂದೇ ವ್ಯಕ್ತಿಗೆ ಬೇರೆ ಬೇರೆ ವರ್ಷದಲ್ಲಿ ವಸತಿ ಯೋಜನೆ ಅಡಿಯಲ್ಲಿ ಮಂಜೂರಾತಿ ಮಾಡಿದ ಬಗ್ಗೆ ಯಾವುದೇ ವಿವರಣೆ ನೀಡಿರುವುದಿಲ್ಲ. ನಿ.ಪಿ.5, 6 ಮತ್ತು 7 ನ್ನು ಪರಿಶೀಲಿಸಿದಾಗ ಅವುಗಳ ಮೇಲೆ ಅಧ್ಯಕ್ಷರು, ಆ.ಸ.ನೌ ರವರು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸಕೋಟೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರುಗಳು ಸಹಿ ಇರುತ್ತದೆ. ಅದರಂತೆ ನಿ.ಪಿ.8 ಮತ್ತು 9 ರಲ್ಲಿ ಪಿ.ಡಬ್ಲ್ಯೂ.1 ಇವರು ನುಡಿದಂತೆ ಒಂದೇ ವ್ಯಕ್ತಿಯ 2 ಅರ್ಜಿಗಳು ಇದ್ದು, ಎರಡರಲ್ಲಿಯೂ ಛಾಯಾಚಿತ್ರಗಳು ಒಂದೇ ವ್ಯಕ್ತಿಯದ್ದು ಆಗಿರುತ್ತದೆ. ಅದರಂತೆ ನಿ.ಪಿ.11 ಮತ್ತು 12ನ್ನು ಪರಿಶೀಲಿಸಿದಾಗ ಒಂದೇ ಕುಟುಂಬಕ್ಕೆ ಇಬ್ಬರಿಗೆ ಮನೆ ಮಂಜೂರು ಮಾಡಿದ್ದು ಕಂಡುಬರುತ್ತದೆ. ಅಂಶ–1 ರಲ್ಲಿ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಗ್ರಾಮ ಪಂಚಾಯಿತಿಯ ಸದಸ್ಯರಾದ ದೇವರಾಜ್ ಮತ್ತು ಪದ್ಮಾ ಇವರ ಸಂಬಂಧಿಕರಿಗೆ ಮನೆ ಮಂಜೂರು ಮಾಡಿರುತ್ತಾರೆ ಎನ್ನುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸದೇ ಇದ್ದರೂ ಸಹಿತ ನಿ.ಪಿ.1 ರಿಂದ 12 ರಂತೆ ಒಂದೇ ಕುಟುಂಬಕ್ಕೆ 2 ಮನೆಗಳು ಹಾಗೂ ಒಂದೇ ವ್ಯಕ್ತಿಗೆ 2 ಸಲ ಮನೆ ಮಂಜೂರು ಮಾಡಿದ್ದು ಕಂಡುಬರುತ್ತದೆ. ಆದ್ದರಿಂದ ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

20.ಅಂಶ–2: ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಕಮ್ಮಸಂದ್ರ ಗ್ರಾಮದ ಸತ್ಯವಾರ ರಸ್ತೆಯಿಂದ ಭಜಂತ್ರಿ ಮನೆಯವರಿಗೆ ಚರಂಡಿ ರಿಪೇರಿ ಮಾಡುವ ಕಾಮಗಾರಿಗೆ ಸಂಬಂಧಪಟ್ಟಂತೆ ಅಂದಾಜುಪಟ್ಟಿಯನ್ನು ಹಾಜರುಪಡಿಸಿದ್ದು ಅದರ ಮೊತ್ತ ರೂ.20,000/–ಗಳಾಗಿದ್ದು ಅದನ್ನು ಕಿರಿಯ ಅಭಿಯಂತರರು ತಾಲ್ಲೂಕು ಪಂಚಾಯತ್, ಹೊಸಪೇಟೆ ಇವರಿಂದ ತಯಾರಿಸಿ ಸಹಿ ಮಾಡಿದ್ದು ಅದನ್ನು ನಿ.ಪಿ.13 ರಂತೆ ಗುರುತಿಸಿಕೊಂಡಿರುತ್ತಾರೆ.

ಮುಂದುವರೆದು ಈ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೆ ಬಿಲ್ಲು ಹಾಜರುಪಡಿಸಿದ್ದು, ಅದನ್ನು ನಿ.ಪಿ.14 ಅಂತಾ ಗುರುತಿಸಿಕೊಂಡಿದ್ದು ಅದರಲ್ಲಿ ಸಾಮಗ್ರಿಗಳನ್ನು ಖರೀದಿಸಲು ರೂ.5000/– ಹಾಗೂ ಕೂಲಿಗಾಗಿ ರೂ.4800/– ಗಳಂತ ನಮೂದು ಇದ್ದು ಆದರೆ ಸಾಮಗ್ರಿಗಳ ಬಗ್ಗೆ ಮತ್ತು ಹಣ ಸಂದಾಯ ಮಾಡಿದ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು ಈ ಕಾಮಗಾರಿಗೆ ಸಂಬಂಧಪಟ್ಟಂತೆ 2ನೇ ಮತ್ತು ಅಂತಿಮ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.15 ಅಂತಾ ಗುರುತಿಸಲಾಗಿದ್ದು ಅದಕ್ಕೆ ಅಧ್ಯಕ್ಷರ ಸಹಿ ಇರುವುದಿಲ್ಲ ಅಂತಾ ನುಡಿದಿರುತ್ತಾರೆ. ಅಲ್ಲದೇ ಎನ್.ಎಂ.ಆರ್ ನಿ.ಪಿ.16 ರಂತೆ ಗುರುತಿಸಿಕೊಂಡಿದ್ದು ನಂತರ ಅದನ್ನು ಹೊಡೆದುಹಾಕಲಾಗಿದೆ ಅಂತಾ ನುಡಿದಿರುತ್ತಾರೆ. ಆ.ಸ.ನೌ ರವರು ಸಹ ಇದೇ ದಾಖಲಾತಿಗಳನ್ನು ನಿ.ಡಿ.4 ರಂತೆ ಹಾಜರುಪಡಿಸಿರುತ್ತಾರೆ. ಮೇಲಿನ ದಾಖಲಾತಿಗಳನ್ನು ಪರಿಶೀಲಿಸಿದಾಗ ಸದರಿ ಕಾಮಗಾರಿಯು 2003ನೇ ಸಾಲಿಗೆ ಸಂಬಂಧಪಟ್ಟಿದ್ದು ಇದ್ದು ಸಾಮಗ್ರಿಗಳನ್ನು ಖರೀದಿ ಮಾಡಿದ ಬಗ್ಗೆ ಹಣ ಸಂದಾಯ ರಶೀದಿಯನ್ನು ಹಾಜರುಪಡಿಸಿರುತ್ತಾರೆ. ಇದಕ್ಕೆ ಅಧ್ಯಕ್ಷರು ಹಾಗೂ ಆ.ಸ.ನೌರವರ ಸಹಿ ಇರುತ್ತದೆ. 2ನೇ ಮತ್ತು ಅಂತಿಮ ಬಿಲ್ಲಿನಲ್ಲಿ ಗುತ್ತಿಗೆದಾರರು ರೂ.10000/–ಗಳನ್ನು ಪಡೆದುಕೊಂಡಿರುತ್ತಾರೆ ಅಂತಾ ಸಹಿ ಮಾಡಿದ್ದು ಅದಕ್ಕೆ ಆ.ಸ.ನೌ ರವರು ಸಹಿ ಇರುತ್ತದೆ. ಅದರಂತೆ ಕೂಲಿಕಾರರಿಗೆ ಹಣ ಸಂದಾಯ ಮಾಡಿದ ಬಗ್ಗೆ ಎನ್.ಎಂ.ಆರ್ ಶೀಟನ್ನು ಹಾಜರುಪಡಿಸಿದ್ದು ಅದರಲ್ಲಿ ಕೂಲಿಕಾರರ ಸಹಿ ಇದ್ದು ಆ.ಸ.ನೌ ಮತ್ತು ಅಧ್ಯಕ್ಷರ ಸಹಿಗಳು ಇರುತ್ತದೆ. ಆದ್ದರಿಂದ ಈ ಅಂಶವನ್ನು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ರುಜುವಾತುಪಡಿಸಿರುವುದಿಲ್ಲ.

21. ಅಂಶ–3: ನೀರು ಹೊಂಡ ಮತ್ತು ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ಸಂಬಂಧಪಟತೆ ಸದರಿ ಕಾಮಗಾರಿಯನ್ನು ಮಾಡದೇ ಎಸ್ಟಿಮೇಷನ್, ಬಿಲ್ಲುಗಳನ್ನು ಸೃಷ್ಟಿಸಿ ರೂ.16,625/– ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಆಪಾದನೆ ಇದ್ದು ಈ ಬಗ್ಗೆ ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಕಾಮಗಾರಿಯ ಅಂದಾಜುಮೊತ್ತ ರೂ.17,005/– ಇದ್ದು ಅದಕ್ಕೆ ಕಿರಿಯ ಅಭಿಯಂತರರ ಆ.ಸ.ನೌ ಮತ್ತು ಅಧ್ಯಕ್ಷರು ಸಹಿ

ಮಾಡಿದ್ದು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಸಹಿ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಸದರಿ ದಾಖಲಾತಿಯನ್ನು ನಿ.ಪಿ.17 ರಂತೆ ಗುರುತಿಸಲಾಗಿದೆ. ನಿ.ಪಿ.17 ಇದು ಕೇವಲ ಅಂದಾಜುಪಟ್ಟಿ ಇರುತ್ತದೆ ಅದನ್ನು ತಯಾರಿಸಿದವರು ಕಿರಿಯ ಸಹಾಯಕ ಇಂಜಿನಿಯರ್ ಇರುವುದರಿಂದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ಸಹಿ ಅವಶ್ಯಕತೆ ಇರುವುದಿಲ್ಲ. ಸದರಿ ಅಂದಾಜು ಪತ್ರಿಕೆಯಂತೆ ಕಾಂಟ್ರಾಂಕ್ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.18 ಎಂದು ಗುರುತಿಸಲಾಗಿದ್ದು ಅದರಲ್ಲಿ ತೆರಿಗೆ ಹಣ 385/- ಗಳನ್ನು ಕಡಿತಗೊಳಿಸಿ 16625/- ಗಳನ್ನು ಚೆಕ್ ಮುಖಾಂತರ ಗುತ್ತಿಗೆದಾರರಿಗೆ ನೀಡಲಾಗಿದ್ದು ಕಂಡುಬರುತ್ತದೆ. ಪಿ.ಡಬ್ಲ್ಯೂ.1 ಇವರ ಪ್ರಕಾರ ಈ ಕಾಮಗಾರಿಗೆ ಸಂಭಂಧಪಟ್ಟಂತೆ ಅಳತೆ ಪುಸ್ತಕವನ್ನು ಆ.ಸ.ನೌ ರವರು ಹಾಜರುಪಡಿಸಿರುವುದಿಲ್ಲ ಅಂತಾ ಹೇಳಿರುತ್ತಾರೆ. ದೂರನ್ನು ಪರಿಶೀಲಿಸಿದಾಗ ಈ ದೂರನ್ನು ಗ್ರಾಮ ಪಂಚಾಯಿತಿಯ ಸದಸ್ಯರಾದ ದೇವರಾಜ್ ಮತ್ತು ಪದ್ಮಾವತಿ ಇವರ ಮೇಲೆ ದಾಖಲಿಸಿದ್ದು ಮೊದಲು ಅವರಿಂದ ಆಕ್ಷೇಪಣೆಗಳನ್ನು ತರಿಸಲಾಗಿದ್ದು ನಂತರ ಆ.ಸ.ನೌ ರವರನ್ನು ಎದುರುದಾರ 3 ಎಂದು ಸೇರಿಸಿಕೊಂಡಿದ್ದು ಇರುತ್ತದೆ. ಎದುರುದಾರು 3 ಇವರಿಂದ ಆಕ್ಷೇಪಣೆಯನ್ನು ತರಿಸಲಾಗಿದ್ದು ಆದರೆ ದಾಖಲಾತಿಗಳನ್ನು ತರಿಸಿಕೊಂಡಿದ್ದು ಇರುವುದಿಲ್ಲ ಕೇವಲ ಅಂದಾಜುಪತ್ರಿಕೆ ಮೇಲೆ ಹಾಗೂ ಕಾಂಟ್ರಾಂಕ್ ಸರ್ಟಿಫಿಕೇಟ್ ಮೇಲೆ ಹಣ ದುರುಪಯೋಗವಾಗಿದೆ ಅಂತಾ ಹೇಳುವುದು ಸಮಂಜಸ ಅನಿಸುವುದಿಲ್ಲ. ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ದೇವರಾಜ್ ಮತ್ತು ಪದ್ಮಾವತಿ ಇವರ ಕಡೆಯಿಂದ ಕಡತಗಳನ್ನು ಮಾತ್ರ ತರಿಸಿಕೊಂಡಿದ್ದು ಅವುಗಳ ಸಹ ಪೂರ್ಣಪ್ರಮಾಣದ ದಾಖಲಾತಿಗಳು ಇರುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಅಂಶವನ್ನು ಸಹ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ರುಜುವಾತುಪಡಿಸಿರುವುದಿಲ್ಲ.

22.ಅಂಶ-4: ಕಮ್ಮಸಂದ್ರ ಸತ್ಯವಾರ ರಸ್ತೆಯಿಂದ ಭಜಂತ್ರಿ ಮನೆ ರಸ್ತೆವರೆಗಿನ ರಸ್ತೆ ಅಭಿವೃದಿ ಕಾಮಗಾರಿಗೆ ಸಂಬಂಧಪಟ್ಟಂತೆ ಸದರಿ ಕಾಮಗಾರಿಯನ್ನು ಕೈಗೊಳ್ಳದೇ ದಾಖಲೆಗಳನ್ನು ಸೃಷ್ಟಿಸಿ 33,433/- ಗಳನ್ನು ದುರುಪಯೋಗ ಪಡಿಸಿಕೊಂಡಿದ್ದು ಇರುತ್ತದೆ ಅಂತಾ ಆಪಾದನೆ ಇದ್ದು ಪಿ.ಡಬ್ಲ್ಯೂ.1 ಇವರು ಅಂದಾಜು ಪತ್ರಿಕೆ ಹಾಗೂ ಮೊದಲನೇ ಹಾಗೂ ಅಂತಿಮ ಬಿಲ್ಲಿನ ಮೇಲೆ

ದಿನಾಂಕ ನಮೂದು ಮಾಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಸದರಿ ದಾಖಲಾತಿಗಳನ್ನು ನಿ.ಪಿ.19 ಮತ್ತು 20 ಅಂತಾ ಗುರುತಿಸಲಾಗಿದೆ. ಈ 2 ದಾಖಲಾತಿಗಳನ್ನು ಹೊರತುಪಡಿಸಿ ಮಂಡನಾಧಿಕಾರಿಗಳು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಈ 2 ದಾಖಲೆಗಳಿಂದ ಹಣ ದುರುಪಯೋಗವಾಗಿರುತ್ತದೆ ಅಂತಾ ನಿರ್ಧರಿಸಲು ಸಾಕಾಗುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಅಂಶವನ್ನು ಸಹ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ರುಜುವಾತುಪಡಿಸಿರುವುದಿಲ್ಲ.

23. ಅದರಂತೆ ಅಂಶ–5: ಕಮ್ಮಸಂದ್ರ ಗ್ರಾಮದ ಚರಂಡಿ ಹೂಳೆತ್ತುವ ಕಾಮಗಾರಿಗೆ ಸಂಬಂಧಪಟ್ಟಂತೆಯೂ ಸಹ ಕಾಮಗಾರಿಯನ್ನು ಮಾಡದೇ ದಾಖಲೆಗಳನ್ನು ಸೃಷ್ಟಿಸಿ 8,140/– ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಆಪಾದನೆ ಇದ್ದು ಈ ಬಗ್ಗೆ ಪಿ.ಡಬ್ಲ್ಯೂ.1 ಇವರು ಅಂದಾಜುಪತ್ರಿಕೆ ಮತ್ತು ಕಾಂಟ್ರಾಂಕ್ ಸರ್ಟಿಫಿಕೇಟನ್ನು ನಿ.ಪಿ.21 ಮತ್ತು 22 ರಂತೆ ಗುರುತಿಸಿಕೊಂಡಿರುತ್ತಾರೆ. ಈ 2 ದಾಖಲಾತಿಗಳನ್ನು ಹೊರತುಪಡಿಸಿ ಈ ಆಪಾದನೆಯನ್ನು ಸಾಭೀತುಪಡಿಸಲು ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಕೇವಲ ಈ 2 ದಾಖಲೆಗಳಿಂದ ಹಣ ದುರುಪಯೋಗವಾಗಿರುತ್ತದೆ ಅಂತಾ ನಿರ್ಧರಿಸಲು ಸಾಕಾಗುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಅಂಶವನ್ನು ಸಹ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ರುಜುವಾತುಪಡಿಸಿರುವುದಿಲ್ಲ.

24. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳಲ್ಲಿ ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಅಂಶ–2 ರಿಂದ 5 ನ್ನು ನಕಾರಾತ್ಮಕವಾಗಿ ನಿರೂಪಿಸಿರುತ್ತಾರೆ ಅಂತಾ ನಿರ್ಣಯಕ್ಕೆ ಬಂದಿರುತ್ತೇನೆ.

25. **ಅಂಶ–6: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

# ನಿರ್ಣಯ

ಆ.ಸ.ನೌಕರ **ಶ್ರೀ. ನಂಜೇಗೌಡ,** ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ, ಲಕ್ಕೋಂಡನಹಳ್ಳಿ ಗ್ರಾಮ ಪಂಚಾಯಿತಿ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳಲ್ಲಿ ಅಂಶ–1 ರಲ್ಲಿ ಆ.ಸ.ನೌ ರವರು ಒಂದೇ ಫಲಾನುಭವಿಗಳಿಗೆ ಬೇರೆ ಬೇರೆ ಆಶ್ರಯ ಯೋಜನೆ ಅಡಿಯಲ್ಲಿ ಮನೆ ಮಂಜೂರು ಮಾಡಿ ಹಾಗೂ ಒಂದೇ ಕುಟುಂಬದವರಿಗೆ ಎರಡೆರಡು ಮನೆಗಳನ್ನು ಮಂಜೂರು ಮಾಡಿರುತ್ತಾರೆ ಅಂತಾ ಕಂಡುಬಂದಿದ್ದರಿಂದ ಭಾಗಶಃ ಸಕಾರಾತ್ಮಕವಾಗಿ ಹಾಗೂ ಅಂಶ–2 ರಿಂದ 5 ನ್ನು ನಕಾರಾತ್ಮಕವಾಗಿ ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/05/2012 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

Sd/- 9/12/22

(ಸುದೇಶ್ ರಾಜಾರಾಮ್ ಪರದೇಶಿ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Shivappa Salagare S/o Rangappa, Member Secretary, Gadag. |
| 2 | **Documents marked on behalf of the Disciplinary Authority Ex.P-1 to Ex.P-22** | |
| | **Ex.P.1** | Complaint given to this institution. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Letter dtd: 07/02/2011 submitted to this institution. |
| | **Ex.P.5** | List of beneficiaries in Ashraya Yojane 2006-2007 with marked portion. |
| | **Ex.P.6** | List of beneficiaries in Ashraya Yojane 2008-2009 with marked portion. |
| | **Ex.P.7** | List of beneficiaries in Indira Avas Yojane 2009-20010 with marked portion. |
| | **Ex.P.8** | Beneficiary details in Rajiv Gandhi Housing Society Ltd. |
| | **Ex.P.9** | Beneficiary details in Rajiv Gandhi Housing Society Ltd. |
| | **Ex.P. 10** | List of beneficiaries in Indira Avas Yojane 2009-20010 with marked portion. |
| | **Ex.P. 11** | Beneficiary details in Rajiv Gandhi Housing Society Ltd. |

| | | |
|---|---|---|
| | **Ex.P. 12** | Beneficiary details in Rajiv Gandhi Housing Society Ltd. |
| | **Ex.P. 13** | Estimation pertains to Lakkondanahalli Grama. |
| | **Ex.P. 14** | Contract certificate. |
| | **Ex.P. 15** | Contract certificate. |
| | **Ex.P. 16** | Copy of NMR. |
| | **Ex.P. 17** | Estimation pertains to Kammasandra Grama. |
| | **Ex.P. 18** | Contract certificate. |
| | **Ex.P. 19** | Estimation pertains to Hoskote Taluk. |
| | **Ex.P. 20** | Contract certificate. |
| | **Ex.P. 21** | Estimation pertains to Hoskote Taluk. |
| | **Ex.P. 22** | Contract certificate. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Nanjegowda M S/o Late Muniyappa. |
| 4 | **Documents marked on behalf of the DGOs through the complainant** | |
| | **Ex.D.1** | Letter dtd: 12/08/2019 addressed to CEO, ZP, Bengaluru Rural District. |
| | **Ex.D.2** | Documents pertaining to Lakkondanahalli Grama. |
| | **Ex.D.3** | Documents pertaining to 1st bills to 4th bills. |
| | **Ex.D.4** | Documents pertaining to bills. |

| | | |
|---|---|---|
| | **Ex.D.5** | Contract certificate. |
| | **Ex.D.6** | Contract certificate. |
| | **Ex.D.7** | Contract certificate. |

Dated this the 9th December, 2022

Sd/- 9/12/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.